**<u>ದಿನಾಂಕಃ 01-02-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ 4 ಎ ದಿಂದ ಎಫ್ ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಎ.ಕೆ. ವಕೀಲರಿಂದಃ</u>**

ನನಗೆ ಒದು ಬರಹ ಗೊತ್ತಿಲ್ಲ. ನನಗೆ ಈ ದಾವೆಯ ಬಗ್ಗೆ ಮಾಹಿತಿ ಇದೆ ಎಂದರೆ ಸ್ವಲ್ಪ ಇದೆ. ಈ ದಾವೆಯನ್ನು ಕಾಳಪ್ಪ ಮಾಸ್ತರ ಎಂಬುವವರು ನಾಗಪ್ಪ ಮತ್ತು ರವಿ ರವರ ವಿರುದ್ದ ಹಾಕಿದ್ದಾರೆ. ನನಗೆ ಈ ದಾವೆಯನ್ನು ಯಾಕೆ ಹಾಕಿದ್ದಾರೆ ಎಂದು ಗೊತ್ತಿದೆಯಾ ಎಂದರೆ ಇಲ್ಲ. ದಾವೆಯನ್ನು ಎಷ್ಟು ಆಸ್ತಿಗಳ ಕುರಿತು ಹಾಕಿದ್ದಾರೆ ಎಂದರೆ 3 ಎಕರೆಗೆ ಸಂಬಂದಪಟ್ಟಂತೆ ಹಾಕಿರುತ್ತಾರೆ. ಅದು ಯಾವ ಊರಿನ ಆಸ್ತಿ ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿದೆಯಾ ಎಂದರೆ ಇಲ್ಲ. ನನಗೆ ಪ್ರತಿವಾದಿ 4 ಎ ದಿಂದ ಎಫ್ ಮತ್ತು 5 ನೇ ಪ್ರತಿವಾದಿಯ ಕುಟುಂಬದವರ ಬಗ್ಗೆ ಗೊತ್ತಿದೆಯಾ ಎಂದರೆ ಇಲ್ಲ. ನನಗೆ ಪ್ರತಿವಾದಿ 4 ಎ ದಿಂದ ಎಫ್ ಮತ್ತು 5 ನೇ ಪ್ರತಿವಾದಿಯ ರವರ ನಡುವೆ ದಾರಿ ವಿಚಾರವಾಗಿ ಜಗಳವಾಗಿತ್ತು ಎಂದರೆ ನಿಜ.

2. ನಾನು ರಾಮನಗೌಡ ದಾರಿಯ ಸಂಬಂದ ದಾಖಲು ಮಾಡಿರುವ ಕೇಸಿನಲ್ಲಿಯೂ ಸಹ ಸಾಕ್ಷಿ ಹೇಳಿರುತ್ತೇನೆ ಎಂದರೆ ನಿಜ. ನಾನು ಆ ಕೇಸಿನಲ್ಲಿ ಸಾಕ್ಷಿ ಹೇಳಿ ಸುಮಾರು 15 ವರ್ಷ ಆಗಿದೆ ಎಂದರೆ ಸರಿ. ಆಗಿನಿಂದಲೂ ನನ್ನ ಮತ್ತು ಮೇಲೆ ಹೇಳಿದ ಪ್ರತಿವಾದಿಗಳ ನಡುವೆ ಮನಸ್ತಾಪ ಇದೆ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ತಯಾರು ಮಾಡಲು ಯಾರು ಮಾಹಿತಿ ಕೊಟ್ಟಿದ್ದಾರೆ ಎಂದರೆ ಕಾಳಪ್ಪ ಮಾಸ್ತರ್ ಕೊಟ್ಟಿದ್ದಾರೆ ನಾನು ಸಹಿ ಮಾಡಿರುತ್ತೇನೆ. ನಾನು ಸಾಕ್ಷಿ ಪ್ರಮಾಣ ಪತ್ರಕ್ಕೆ ಸಹಿ ಮಾಡಿರುವುದನ್ನು ಹೊರತುಪಡಿಸಿ ಬೇರೆ ಮಾಹಿತಿ ಗೊತ್ತಿದೆಯಾ ಎಂದರೆ ಇಲ್ಲ.

**<u>ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ ಬಿ.ಜಿ.ಆರ್ ವಕೀಲರಿಂದಃ</u>**

ಪ್ರತಿವಾದಿ 4 ಎ ದಿಂದ ಎಫ್ ಮತ್ತು 5 ನೇ ಪ್ರತಿವಾದಿಯ ಪರ ಶ್ರೀ ಎಸ್ ಎ ಕೆ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದಾರೆ.

**<u>ಉಳಿದ ಪ್ರತಿವಾದಿಗಳು ಹಾಗೂ ಅವರ ವಕೀಲರನ್ನು ಕರೆಸಲಾಯಿತು. ಗೈರು ಹಾಜರಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.</u>**

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

(ಬಿ.ಸಿದ್ದರಾಜು)

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.